618 (532) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ರೇವು ನಾಯಕ್ ಬೆಳಮಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪಶುಸಂಗೋಪನೆ ಇಲಾಖೆಯಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು? (ವಿವರ ನೀಡುವುದು)

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು?

ಇ) ಕೊರತೆ ಇರುವ ಹುದ್ದೆಗಳನ್ನು ತುಂಬಲು ಕೈಗೊಂಡ ಕ್ರಮವೇನು? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕಳೆದ ಅಧಿವೇಶನದಲ್ಲಿ ಹೇಳಿದಂತೆ ಭರ್ತಿ ಮಾಡಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶು ಸಂಗೋಪನಾ ಇಲಾಖೆಯಲ್ಲಿ ಒಟ್ಟು 3816 ಹುದ್ದೆಗಳು ಖಾಲಿ ಇವೆ ಹುದ್ದೆವಾರು ವಿವರ ಅನುಬಂಧದಲ್ಲಿ ಸಲ್ಲಿಸಿದೆ

ಆ) ಮುಂಡರಗಿ ಮತ ಕ್ಷೇತ್ರದಲ್ಲಿ ಒಟ್ಟು 33 ಹುದ್ದೆಗಳು ಖಾಲಿ ಇವೆ ಹುದ್ದೆವಾರು ವಿವರ ಈ ಕೆಳಗೆ ವಿವರಿಸಿ

ಕ್ರ.ಸಂ	ಹುದ್ದೆಯ ಹೆಸರು	ಖಾಲಿ
1	ಸಹಾಯಕ ನಿರ್ದೇಶಕರು	1
2	ಪಶುವೈದ್ಯಾಧಿಕಾರಿಗಳು	8
3	ಪಶುವೈದ್ಯಕೀಯ ಪರೀಕ್ಷಕರು	7
4	ಪಶುವೈದ್ಯಕೀಯ ಸಹಾಯಕರು	9
5	ವಾಹನ ಚಾಲಕರು	1
6	ಡಿ ದರ್ಜೆ ನೌಕರರು	7
	ಒಟ್ಟು	**33**

ಇ) ಹೌದು, ದಿನಾಂಕ 2-5-2006, 22-6-2006 ಮತ್ತು 18-11-2006 ರಂದು ವಿಶೇಷ ನೇಮಕಾತಿ ನಿಯಮದಡಿ 2003ರ ಅಡಿ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ ಇವುಗಳಲ್ಲಿ ಮುಂಡರಗಿ ಮತಕ್ಷೇತ್ರದ ಪಶು ಚಿಕಿತ್ಸಾಲಯ ಹಮ್ಮಿಗಿ ಮತ್ತು ಪೇಟಾಲೂರು ಇಲ್ಲಿಗೆ ಇಬ್ಬರು ಪಶುವೈದ್ಯಾಧಿಕಾರಿಗಳನ್ನು ನೇಮಿಸಿದೆ ಹಾಗೂ ಡಿ ದರ್ಜೆ ನೌಕರರ ಒಂದು ಹುದ್ದೆ ಭರ್ತಿ ಮಾಡಲಾಗಿದೆ

ಈ) ಶೇಕಡಾ 90ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10% ರಷ್ಟು ನೇರ ನೇಮಕಾತಿ ಮುಖಾಂತರ ಭತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರು ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಅನುಬಂಧ - 1

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1	ಆಯುಕ್ತರು	1	1	0
2	ನಿರ್ದೇಶಕರು	1	1	0
3	ಅಪರ ನಿರ್ದೇಶಕರು	3	2	1
4	ಜಂಟಿ ನಿರ್ದೇಶಕರು	7	5	2
5	ಜಂಟಿ ನಿರ್ದೇಶಕರು(ಅಂಕಿ-ಅಂಶ)	1	1	0
6	ಉಪ ನಿರ್ದೇಶಕರು	53	53	0
7	ಆರ್ಥಿಕ ಸಹಾಯಕರು	1	1	0
8	ಕೇಂದ್ರ ಕಛೇರಿ ಸಹಾಯಕರು	2	2	0
9	ಆಡಳಿತ ಸಹಾಯಕರು	11	4	7
10	ಸಹಾಯಕ ನಿರ್ದೇಶಕರು	435	363	72
11	ಸಹಾಯಕ ನಿರ್ದೇಶಕರು (ಅಂಕಿ-ಅಂಶ)	4	4	0
12	ಪಶುವೈದ್ಯಾಧಿಕಾರಿ	2018	1194	824
13	ಪಶುವೈದ್ಯಕೀಯ ಮೇಲ್ವಿಚಾರಕರು	248	161	82
14	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	2099	2000	99
15	ಪಶುವೈದ್ಯಕೀಯ ಪರೀಕ್ಷಕರು	1582	920	657
16	ಪಶುವೈದ್ಯಕೀಯ ಸಹಾಯಕರು	1900	1523	487
17	ಅಧೀಕ್ಷಕರು	69	54	15
18	ಪ್ರಥಮ ದರ್ಜೆ ಸಹಾಯಕರು	180	160	20
19	ದ್ವಿತೀಯ ದರ್ಜೆ ಸಹಾಯಕರು	211	195	16

20	ಶೀಘ್ರಲಿಪಿಗಾರರು	16	7	9
21	ಹಿರಿಯ ಬೆರಳಚ್ಚುಗಾರರು	11	9	2
22	ಬೆರಳಚ್ಚುಗಾರರು	89	87	22
23	ವಾಹನ ಚಾಲಕರು	294	201	93
24	ಡಿ ದರ್ಜೆ ನೌಕರರು	6470	5035	1415
25	ಇತರ ವೃಂದ	59	16	43
	ಒಟ್ಟು	**15820**	**12004**	**3816**

619 (468) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಪಶುಚಿಕಿತ್ಸಾಲಯಗಳೆಷ್ಟು?

ಆ) ಅವುಗಳಿಗೆ ಮಂಜೂರಾದ ವಿವಿಧ ವರ್ಗಗಳ ಹುದ್ದೆಗಳೆಷ್ಟು? ಎಷ್ಟು ಹುದ್ದೆಗಳು ಖಾಲಿ ಇವೆ? ಅವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಪಶುಚಿಕಿತ್ಸಾಲಯಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದು, ಅವುಗಳನ್ನು ಔಷಧಿಗಳ ಸೂಕ್ತ ಪೂರೈಕೆಯೊಂದಿಗೆ ಸುವ್ಯವಸ್ಥಿತವಾಗಿ ಇರಿಸಲು ಮತ್ತು ಜಾನುವಾರುಗಳ ಆರೋಗ್ಯ ರಕ್ಷಣೆಯನ್ನು ಸಮರ್ಪಕವಾಗಿ ಕೈಗೊಳ್ಳಲು ಸರ್ಕಾರದ ಆದ್ಯತೆಯ ಕ್ರಮಗಳೇನು?

ಈ) ಎಷ್ಟು ಪಶು ಚಿಕಿತ್ಸಾಲಯಗಳು ಸ್ವಂತ ಕಟ್ಟಡ ಹಾಗೂ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಹೊಂದಿವೆ?

ಉ) ಉಳಿದ ಚಿಕಿತ್ಸಾಲಯಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಪಶು ಆಸ್ಪತ್ರೆ ಮತ್ತು 32 ಪಶು ಚಿಕಿತ್ಸಾಲಯಗಳನ್ನೊಳಗೊಂಡಂತೆ 104 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದೆ